# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **444**

ಸದಸ್ಯರ ಹೆಸರು : ಡಾ. ತಳವಾರ್ ಸಾಬಣ್ಣ<br>(ನಾಮನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 30-01-2026

ಉತ್ತರಿಸುವ ಸಚಿವರು : ಕೃಷಿ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯ ಆರ್ಥಿಕತೆಯ ಬೆನ್ನೆಲುಬಾದ ತೊಗರಿ ಬೆಳೆಯನ್ನು ಪ್ರತಿ ವರ್ಷ ಎಷ್ಟು ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತಿದೆ; (ಐದು ವರ್ಷಗಳ ವಿವರ ನೀಡುವುದು)</td><td>ಕಲಬುರಗಿ ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ತೊಗರಿ ಬೆಳೆಯನ್ನು ಬೆಳೆಯುತ್ತಿರುವ ಪ್ರದೇಶದ ವಿಸ್ತೀರ್ಣವು ಈ ಕೆಳಗಿನಂತಿದೆ.
<table>
<tr><th>ವರ್ಷ</th><th>ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)</th></tr>
<tr><td>2020-21</td><td>593699</td></tr>
<tr><td>2021-22</td><td>633798</td></tr>
<tr><td>2022-23</td><td>486238</td></tr>
<tr><td>2023-24</td><td>577430</td></tr>
<tr><td>2024-25</td><td>629925</td></tr>
</table>
(ಮೂಲ:2020-21 ರಿಂದ 2024-25ನೇ ಸಾಲಿನವರೆಗೆ ಅಂತಿಮ ಅಂದಾಜು ವರದಿಯಂತೆ)<br><br>
2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಬೆಳೆ ಸಮೀಕ್ಷೆ ವರದಿಯನ್ವಯ 5,66,826 ಹೆಕ್ಟೇರ್ ನಷ್ಟು ತೊಗರಿ ಬೆಳೆಯನ್ನು ಬಿತ್ತನೆ ಮಾಡಲಾಗಿರುತ್ತದೆ.</td></tr>
<tr><td>ಆ)</td><td>ಜಿಲ್ಲೆಯ ತೊಗರಿ ಬೆಳೆಗಾರರಿಗೆ ಉತ್ತೇಜನ ನೀಡಲು ಸ್ಥಾಪನೆಯಾದ ತೊಗರಿ ಮಂಡಳಿಗೆ ಒದಗಿಸಿದ ಸಿಬ್ಬಂದಿ ಮತ್ತು ಭೌತಿಕ ಸೌಕರ್ಯಗಳೇನು; (ವಿವರ ನೀಡುವುದು)</td><td>ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಮಂಡಳಿಯಲ್ಲಿ ಕೃಷಿ ಇಲಾಖೆಯಿಂದ ನಿಯೋಜನೆ ಮೇರೆಗೆ 3 ಜನ ಅಧಿಕಾರಿ/ಸಿಬ್ಬಂದಿ, ಒಬ್ಬರು ಗುತ್ತಿಗೆ ಹಾಗೂ 9 ಜನ ಹೊರಗುತ್ತಿಗೆ ಆಧಾರದ ಮೇಲೆ ಮಂಜೂರಾಗಿದ್ದು ಕಾರ್ಯನಿರ್ವಹಿಸುತ್ತಿರುವವರ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ಹುದ್ದೆ</th><th>ಮಂಜೂರು</th><th>ಭರ್ತಿ</th><th>ಖಾಲಿ</th></tr>
<tr><td>1</td><td>ವ್ಯವಸ್ಥಾಪಕ ನಿರ್ದೇಶಕರು (ನಿಯೋಜನೆ)</td><td>1</td><td>0</td><td>1</td></tr>
<tr><td>2</td><td>ಸಹಾಯಕ ಕೃಷಿ ನಿರ್ದೇಶಕರು</td><td>2</td><td>2</td><td>0</td></tr>
<tr><td rowspan="2">3</td><td rowspan="2">ಸಿ ಗುಂಪು</td><td>1 (ಗುತ್ತಿಗೆ)</td><td>1</td><td>0</td></tr>
<tr><td>4 (ಹೊರಗುತ್ತಿಗೆ)</td><td>4</td><td>0</td></tr>
</table></td></tr>
</table>

| | | |
|---|---|---|
| | | <table><tr><td>4</td><td>ಡಿ ಗುಂಪು</td><td>2 (ಹೊರಗುತ್ತಿಗೆ)</td><td>2</td><td>0</td></tr><tr><td>5</td><td>ವಾಹನ ಚಾಲಕರು</td><td>3 (ಹೊರಗುತ್ತಿಗೆ)</td><td>2</td><td>0</td></tr></table><br>ಮಂಡಳಿಯು ತನ್ನದೇಯಾದ ಆಡಳಿತ ಕಛೇರಿ ಕೊಟ್ನೂರು (ಡಿ), ಕಲಬುರಗಿ ಜಿಲ್ಲೆಯಲ್ಲಿ ಹೊಂದಿರುತ್ತದೆ. |
| ಇ) | ಜಿಲ್ಲೆಯ ತೊಗರಿ ಮಂಡಳಿಯು ಅನುದಾನ ಮತ್ತು ಇತರೆ ಸೌಕರ್ಯಗಳ ಕೊರತೆಯಿಂದ ಬಳಲುತ್ತಿದ್ದು, ಮಂಡಳಿಗೆ ಕಾಯಕಲ್ಪ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಗೆ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಬೆಳೆಯುವ ವಿಶಿಷ್ಟವಾದ ಭೌಗೋಳಿಕ ಸೂಚ್ಯಂಕ ಹೊಂದಿದ ತೊಗರಿ ಬೇಳೆಯನ್ನು GI ಅಡಿಯಲ್ಲಿ ನೋಂದಾಯಿತ ರೈತರಿಂದ ತೊಗರಿಯನ್ನು ಖರೀದಿಸಿ, ಅವುಗಳನ್ನು ಸಂಸ್ಕರಿಸಿ, "ಭೀಮಾ ಪಲ್ಸಸ್ ಬ್ರ್ಯಾಂಡ್ ನಡಿ ಮಾರಾಟ ಮಾಡುವ ಹೊಸ ಯೋಜನೆಯ ಅನುಷ್ಠಾನಕ್ಕಾಗಿ 2022-23ನೇ ಸಾಲಿನ ಆಯವ್ಯಯದಲ್ಲಿ ರೂ.2.00ಕೋಟಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ ಹಾಗೂ 2021-22ನೇ ಸಾಲಿನಿಂದ ಆಡಳಿತಾತ್ಮಕ ವೆಚ್ಚಕ್ಕಾಗಿ ಮಂಡಳಿಗೆ ಪ್ರತಿ ವರ್ಷ ರೂ.50.00ಲಕ್ಷ ಅನುದಾನ ರಾಜ್ಯ ಸರ್ಕಾರದಿಂದ ಒದಗಿಸಲಾಗಿರುತ್ತದೆ.<br>ದ್ವಿದಳಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಾಗಿ ಘಟಕ ನಿರ್ಮಿಸಲಾಗುತ್ತಿದೆ.<br>ದ್ವಿದಳಧಾನ್ಯಗಳ ಸಂಗ್ರಹಣೆಗಾಗಿ 100 ಮೆಟ್ರಿಕ್ ಟನ್ ಸಾಮರ್ಥ್ಯದ 2 ಗೋದಾಮುಗಳನ್ನು ನಿರ್ಮಿಸಲಾಗುತ್ತಿದೆ |
| ಈ) | ಉತ್ಕೃಷ್ಟ ತೊಗರಿ ಬೆಳೆಯುವ ಕಲಬುರಗಿ ಜಿಲ್ಲೆಗೆ ಒಂದು ಬ್ರಾಂಡಿಂಗ್ ಹಂತಕ್ಕೆ ಒಯ್ದು ಅಲ್ಲಿನ ರೈತರ ಬದುಕಿಗೆ ಆಧಾರವಾಗಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ? | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ರೈತರಿಂದ ಹಾಗೂ ರೈತ ಉತ್ಪಾದಕರ ಸಂಸ್ಥೆಗಳಿಂದ ಭೌಗೋಳಿಕ ಸೂಚ್ಯಂಕ (GI) ಅಡಿಯಲ್ಲಿ ಪ್ರಮಾಣಿಕರಿಸಲಾದ ತೊಗರಿ ಖರೀದಿಸಿ, ಅವುಗಳ ಸಂಸ್ಕರಣೆ ಮಾಡಿ ಭೀಮಾ ಪಲ್ಸಸ್ ಎಂಬ ಬ್ರ್ಯಾಂಡ್ ಹೆಸರಿನಲ್ಲಿ ಬ್ರ್ಯಾಂಡಿಂಗ್, ಮಾರ್ಕೆಟಿಂಗ್ ಮತ್ತು ಮೌಲ್ಯವರ್ಧನೆ ಮಾಡುವ ಮೂಲಕ ಜನಪ್ರಿಯಗೊಳಿಸುವ ಉದ್ದೇಶ ಹೊಂದಿರುವುದಲ್ಲದೇ, ಈ ಭಾಗದ ರೈತರಿಗೆ ಉತ್ತಮ ಬೆಲೆ ದೊರಕಿಸುವ ಉದ್ದೇಶವಾಗಿದೆ.<br>ಈ ನಿಟ್ಟಿನಲ್ಲಿ ಮಂಡಳಿಯ ವ್ಯಾಪ್ತಿಯಲ್ಲಿ ದ್ವಿದಳಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಾಗಿ ಘಟಕ ನಿರ್ಮಿಸಲಾಗುತ್ತಿದೆ. |

*ಕಡತ ಸಂಖ್ಯೆ:ಕೃ ಇ 26 ಎಎಂಎಸ್ 2026*

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು